# ಬಹೂಪಯೋಗಿ ಬೆಳ್ಳುಳ್ಳಿ ಬಳ್ಳಿ

■ ಶಿವಾನಂದ ಎಸ್ ಭಟ್ಟ



ಪ್ರತಿಯೊಂದು ಸಸ್ಯದ ಭಾಗವೂ ತನ್ನದೇ ಆದ ಬಣ್ಣ, ರುಚಿ ಮತ್ತು ವಾಸನೆಯನ್ನು ಹೊಂದಿರುತ್ತದೆ. ಕೆಲವೊಂದು ಸಸ್ಯಗಳ ಭಾಗವು ವಿಶಿಷ್ಟವೂ, ವಿಭಿನ್ನವೂ ಆಗಿರುತ್ತದೆ. ಅಂತಹ ಸಸ್ಯಗಳ ಸಾಲಿನಲ್ಲಿ ಬೆಳ್ಳುಳ್ಳಿಗೆ ತನ್ನದೇ ಆದ ಸ್ಥಾನವಿದೆ. ಆದರೆ ಇಲ್ಲೊಂದು ಹೂ ಬಿಡುವ ಬಳ್ಳಿಯ ಎಲ್ಲಾ ಭಾಗವೂ ಬೆಳ್ಳುಳ್ಳಿಯ ವಾಸನೆಯನ್ನು ಹೊಂದಿದೆ! ನಿಜಕ್ಕೂ ಇದು ಅಚ್ಚರಿಯ ಸಂಗತಿಯೇ. ಈ ಗಿಡದ ಹೆಸರೇ ಬೆಳ್ಳುಳ್ಳಿ ಬಳ್ಳಿ.

'ಅಡೆನೊಕ್ಯಾಲಿಮ್ಮ ಅಲ್ಯಾಸಿಯಂ' ಎಂಬುದು ಇದರ ಸಸ್ಯಶಾಸ್ತ್ರೀಯ ಹೆಸರು. ಬಿಗ್ನೋನಿಯಾಸೀ ಕುಟುಂಬಕ್ಕೆ ಸೇರಿದ್ದು. ದಕ್ಷಿಣ ಅಮೆರಿಕಾದ ಅಮೆಜಾನ್‌ನ ಮಳೆಕಾಡಿನ ಪ್ರದೇಶವು ಈ ಸಸ್ಯದ ಮೂಲವಾಗಿದ್ದು, ನೀರು ಲಭಿಸುವ ತಂಪಾದ ಪ್ರದೇಶದಲ್ಲಿ ಸೊಂಪಾಗಿ ಬೆಳೆಯುತ್ತದೆ.

ಹೊಳಪಾದ, ಹಚ್ಚ ಹಸಿರಾದ ಎಲೆಗಳನ್ನು ಬಿಡುವ ಈ ಬಳ್ಳಿ ವರ್ಷದಲ್ಲಿ ಎರಡು ಬಾರಿ ಹೂವನ್ನು ನೀಡುತ್ತದೆ. ಹೂಗೊಂಚಲಿನಲ್ಲಿ 10 ರಿಂದ 20 ಹೂವುಗಳಿದ್ದು, ಇವು ಬಳ್ಳಿಯ ಮೇಲೆ ಆರೆಂಟು ದಿನ ಬಾಡದೇ ಇರುತ್ತವೆ. ಮೊದಮೊದಲು ನೇರಳೆ ಬಣ್ಣದಲ್ಲಿರುವ ಹೂಗಳು ಪರಾಗಸ್ಪರ್ಶ ಕ್ರಿಯೆಯ ನಂತರ ಬಿಳಿಯ ಬಣ್ಣಕ್ಕೆ ತಿರುಗುತ್ತವೆ. ಅಂದರೆ ಒಂದೇ ಗೊಂಚಲಿನಲ್ಲಿ ಎರಡು ಬಣ್ಣದ ಹೂವುಗಳನ್ನು ಕಾಣಬಹುದು.

ಬೆಳ್ಳುಳ್ಳಿ ಬಳ್ಳಿಯನ್ನು ಕೈದೋಟದಲ್ಲಿ ಬೆಳೆಸುವುದು ಅತ್ಯಂತ ಸುಲಭ. ಸರಿಯಾಗಿ ಬಲಿತ ಬಳ್ಳಿಯ ತುಂಡನ್ನು ಮೂರರಿಂದ–ನಾಲ್ಕು ಗಂಟುಗಳಿರುವಂತೆ ಕತ್ತರಿಸಿ, ಮಣ್ಣಿನಲ್ಲಿ ನೆಟ್ಟು ಹೊಸ ಗಿಡವನ್ನು ಬೆಳೆಸಬಹುದು.

(8ನೇ ಪುಟ ನೋಡಿ)